ಓ.ಎಸ್ಃ 17/2013
ಡಿ.ಡಬ್ಲ್ಯೂಃ 03
ಶಿವಪ್ಪ ಹಾದಿಮನಿ

**ದಿನಾಂಕಃ 05/03/2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು**

**ಪಾಟೀ ಸವಾಲು ವಾದಿ ಪರ ಶ್ರೀ ವಾಯ್ ಎನ್ ಎಲ್ ವಕೀಲರಿಂದ**

1. ನನ್ನ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿಯನ್ನು ನೀಡಿದ್ದೇನೆ. ನನ್ನ ಊರು ಕೊಲ್ಹಾರ. ಈ ದಾವೆಯನ್ನು ಶಿವಪ್ಪ ರವರು ಪದ್ದವ್ವನ ವಿರುದ್ಧ ಸಲ್ಲಿಸಿದ್ದಾರೆ. ದಾವಾ ಸ್ವತ್ತಿನ ಸಂಃ 2232/ಎ ಅಂತಾ ಇರುತ್ತದೆ. ಸದರಿ ನಿವೇಶನದ ಮೂಲ ಸಂಖ್ಯೆ ನನಗೆ ಹೇಳಲು ಬರುವುದಿಲ್ಲ. ದಾವಾ ಸ್ವತ್ತನ್ನು ಸರಕಾರದವರು ಹನುಮಂತನಿಗೆ ಯಾವಾಗ ನೀಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸರಕಾರದವರು ಹನುಮಂತನಿಗೆ ನಿವೇಶವನ್ನು ನೀಡಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹನುಮಂತ ಯಾವಾಗ ತೀರಿಕೊಂಡಿದ್ದಾರೆ ಮತ್ತು 1 ನೇ ಪ್ರತಿವಾದಿ ಯಾವಾಗ ವಾರಸಾ ಮಾಡಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಹನುಮಂತನ ಸಹೋದರ ಸಂಗಪ್ಪ ಯಾವಾಗ ತೀರಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

2. ಹನುಮಂತ ಮತ್ತು ಸಂಗಪ್ಪನ ಕುಟುಂಬಕ್ಕೆ ಎಷ್ಟು ಆಸ್ತಿಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ಸಂಗಪ್ಪನಿಗೆ ಬಂದ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ ದಾರಿ, ಪಶ್ಚಿಮಕ್ಕೆ ಕಾಶಪ್ಪ ದಂಡಿನ ಎನ್ನುವವರ ಮನೆ, ಉತ್ತರಕ್ಕೆ ಕಲ್ಲಪ್ಪ ಬಳೂತಿ ಅವರ ಮನೆ ಮತ್ತು ದಕ್ಷಿಣಕ್ಕೆ ರಾಯಪ್ಪ ಬಳೂತಿ ಅವರ ಮನೆ ಇರುತ್ತದೆ. ನನ್ನ ಮನೆ ದಾವಾ ಸ್ವತ್ತಿನಿಂದ ಸುಮಾರು 200 ಮೀಟರ್ ಅಂತರದಲ್ಲಿದೆ.

3. ದಾವಾ ಸ್ವತ್ತನ್ನು 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ 2012 ರಲ್ಲಿ ಮಾರಾಟ ಮಾಡಿರುತ್ತಾರೆ. ದಾವಾ ಸ್ವತ್ತಿನಲ್ಲಿ ಈಗ 2 ನೇ ಪ್ರತಿವಾದಿಯೇ ಸುಮಾರು 7-8 ವರ್ಷಗಳಿಂದ ಇದ್ದಾರೆ. ನಾನು ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಈಗಲೂ ವಾದಿಯೇ ಸ್ವಾಧೀನಾನುಭೋಗದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನನಗೆ ಸಾಕ್ಷಿ ನುಡಿಯಲು ನ್ಯಾಯಾಲಯದಿಂದ ಯಾವುದೇ ನೋಟಿಸು ಬಂದಿರುವುದಿಲ್ಲ. ಈಗ 1 ನೇ ಪ್ರತಿವಾದಿ ವಾಸ ಮಾಡುತ್ತಿರುವ ಮನೆ ನಂಬರ ನನಗೆ ಗೊತ್ತಿಲ್ಲ, ಅವರೂ ಸಹ ಅದೇ ಓಣಿಯಲ್ಲಿ ಬಾಡಿಗೆ ಮನೆಯಲ್ಲಿ ಇದ್ದಾರೆ. 2 ನೇ ಪ್ರತಿವಾದಿಯ ಮಕ್ಕಳು ಮತ್ತು ನಾವು ಸ್ನೇಹಿತರು. 2 ನೇ ಪ್ರತಿವಾದಿಯ ಮಕ್ಕಳೇ ನನ್ನನ್ನು ಈ ದಿನ ನ್ಯಾಯಾಲಯಕ್ಕೆ ಸಾಕ್ಷಿ ಹೇಳಲು ಕರೆದುಕೊಂಡು ಬಂದಿದ್ದಾರೆ ಎಂದರೆ ಸರಿ.

4. 1 ನೇ ಪ್ರತಿವಾದಿ ಮತ್ತು 2 ನೇ ಪ್ರತಿವಾದಿಯ ದಾವಾ ಸ್ವತ್ತಿನ ವ್ಯವಹಾರದಲ್ಲಿ ನಾನು ಭಾಗವಹಿಸಿಲ್ಲ. ಸಾಕ್ಷಿ ಮುಂದುವರೆದು ಸದರಿ ವ್ಯವಹಾರದ ಕಾಲಕ್ಕೆ ನಾನು ಸುಮ್ಮನೆ ನಿಂತಿದ್ದೆನು.

ನ್ಯಾಯಾಲಯದ ಪ್ರಶ್ನೆಃ ದಾವಾ ಸ್ವತ್ತಿನಲ್ಲಿರುವ ಮನೆಯ ಬಣ್ಣ ಈಗ ಗ್ರೇ ಕಲರ್ ಇದೆ. ಸದರಿ ಮನೆಗೆ ಕಂಪೌಂಡ ಇಲ್ಲ.

ಈ ಹಂತದಲ್ಲಿ ಸಾಕ್ಷಿದಾರರು ಮುಂದುವರೆದು ದಾವಾ ಸ್ವತ್ತಿನಲ್ಲಿ ಈಗ ಶೆಡ್ಡು ಇದೆ, ಅದರಲ್ಲಿ ಯಾವುದೇ ಮನೆ ಇಲ್ಲ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯ ಮಗನ ಮನೆಯು ಸಹ ಸಮೀಪವೇ ಇರುವುದರಿಂದ 2 ನೇ ಪ್ರತಿವಾದಿ ಸದರಿ ಶೆಡ್ಡಿನಲ್ಲಿ ಮತ್ತು ತನ್ನ ಮಗನ ಮನೆಯಲ್ಲಿ ಎರಡೂ ಕಡೆ ಇರುತ್ತಾರೆ. ದಾವಾ ಸ್ವತ್ತಿನಲ್ಲಿ ಶೆಡ್ಡನ್ನು 2 ನೇ ಪ್ರತಿವಾದಿ ಸುಮಾರು 7-8 ವರ್ಷಗಳ ಹಿಂದೆ ಹಾಕಿರುತ್ತಾರೆ. ಮಾರಾಟ ಮಾಡಿದಾಗ ದಾವಾ ಸ್ವತ್ತಿನಲ್ಲಿ ಶೆಡ್ಡು ಇರಲಿಲ್ಲ,

5. ದಾವಾ ಸ್ವತ್ತಿನ ಅಳತೆ 10 X 10 mtr ಇದೆ. 2 ನೇ ಪ್ರತಿವಾದಿಯ ಮಗನ ಮನೆಯು ದಾವಾ ಸ್ವತ್ತಿನಿಂದ ಎರಡೇ ಮನೆಗಳ ಅಂತರದಲ್ಲಿದೆ. ದಾವಾ ಸ್ವತ್ತಿನಲ್ಲಿ ಈಗಲೂ 2 ನೇ ಪ್ರತಿವಾದಿಯೇ ಕಬ್ಜೆಯಲ್ಲಿ ಇದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿರುವ ಎಲ್ಲ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ನಾನು 2 ನೇ ಪ್ರತಿವಾದಿಯ ಮಕ್ಕಳಿಗೆ ಸಹಾಯ ಮಾಡಲು ಮತ್ತು ವಾದಿಗೆ ತೊಂದರೆ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ತೇಜಸ್ವಿನಿ ಸೊಗಲದ)**
**ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**